ಎಂದಿದೆ. ಪ್ರತಿ 'ಸೆಕ್ಸ್‌ಬಾಟ್' ಅನ್ನು ಕನಿಷ್ಠ ಮೂರೂವರೆ ಸಾವಿರ ಡಾಲರ್‌ಗೆ ಮಾರುವ ಕಂಪನಿಗಳ ವ್ಯವಹಾರ ವಾರ್ಷಿಕ ಇನ್ನೂರು ದಶಲಕ್ಷ ಡಾಲರ್ ದಾಟಿದೆ ಎಂದು ಲೈಂಗಿಕ ಆಟಿಕೆಗಳ ಬಗ್ಗೆ ವಿಮರ್ಶೆ ಪ್ರಕಟಿಸುವ 'ಬೆಡ್ ಬೈಬಲ್' ವೆಬ್‌ತಾಣ ವರದಿ ಮಾಡಿದೆ. ರಿಯಲ್‌ಬಾಟಿಕ್ಸ್‌ನವರ 'ರಿಯಲ್ ಡಾಲ್' (ಲೈಂಗಿಕತೆ ಪ್ರಚೋದಿಸುವ ಬೊಂಬೆ) 'ಹಾರ್ಮೊನಿ' ಎಂಬ ಯಾಂತ್ರಿಕ ಬುದ್ಧಿಮತ್ತೆ ಬಳಸಿಕೊಂಡು ಕೆಲಸ ಮಾಡುತ್ತದೆ.

## ಸರಿ-ತಪ್ಪುಗಳ 'ಜಗಳಬಂದಿ'

ಜನರ ಅಸ್ವಾಭಾವಿಕ ಆಸೆಗಳಿಗೆ ನೀರೆರೆದು ಅವರನ್ನು ಇನ್ನಷ್ಟು ಏಕಾಂಗಿಯನ್ನಾಗಿಸುವ, ವಿಕೃತ ಖುಷಿ ನೀಡುವ, ಸಾಮಾಜಿಕವಾಗಿ ಪ್ರತ್ಯೇಕಿಸುವ ಯಾಂತ್ರಿಕ ಬುದ್ಧಿಮತ್ತೆಯು ಸಾಮಾಜಿಕ ಫೋಭೆಗೆ ಕಾರಣವಾಗುವುದಿಲ್ಲವೆ ಎಂಬ ಪ್ರಶ್ನೆ ಸಹಜವಾಗಿಯೇ ಮುನ್ನೆಲೆಗೆ ಬಂದಿದೆ. ಮಹಿಳೆಯರಿಗಿಂತ ಪುರುಷರನ್ನು ಹೆಚ್ಚು ಆಕರ್ಷಿಸುತ್ತಿರುವ ಎಐ ಗೆಳತಿಯರು ಪುರುಷರ ಜೀವನ ವಿಧಾನವನ್ನೇ ಬದಲಾಯಿಸುತ್ತಿದ್ದಾರೆ.

ಎಷ್ಟೋ ಸಲ ನಿಜಜೀವನದ ಸಂಗಾತಿಗಳೊಂದಿಗೆ ಸರಿಯಾಗಿ ಹೊಂದಿಕೊಳ್ಳಲಾಗದ ಪುರುಷ–ಮಹಿಳೆಯರು ವಿವಾಹದಿಂದಾಚೆಗಿನ ಸಂಬಂಧಗಳಲ್ಲಿ ಸಾಂತ್ವನ ಕಂಡುಕೊಳ್ಳುವುದುಂಟು. ತಮ್ಮ ಮನಸ್ಸಿಗೆ ಹೊಂದುವ, ಖುಷಿ ನೀಡುವ, ರೂಪ–ಅಂತಸ್ತುಗಳಿಗೆ ತಕ್ಕುದಾದ ಸಂಗಾತಿಯ ಆಯ್ಕೆಯಲ್ಲಿ ಎಡವುವವರು ಪರ್ಯಾಯ ಮಾರ್ಗಗಳ ಅನ್ವೇಷಣೆಗಿಳಿಯುತ್ತಾರೆ. ಕಷ್ಟಪಟ್ಟು ಹುಡುಕಿ, ಸ್ನೇಹ ಸಂಪಾದಿಸಿ, ಇನ್ನೇನು ಮದುವೆ ಮಾಡಿಕೊಳ್ಳಬೇಕು ಅಥವಾ ಜೊತೆಗೆ ಜೀವಿಸಬೇಕು ಎಂದು ನಿರ್ಧರಿಸುವಷ್ಟರಲ್ಲಿ ಪರಸ್ಪರರ ಕೊರತೆಗಳು ಎದ್ದು ಕಂಡಾಗ ಒಬ್ಬರಿಗೊಬ್ಬರು ವಿಮುಖರಾಗುತ್ತಾರೆ. ಅರ್ಥ ಮಾಡಿಕೊಳ್ಳಲೆಂದೇ ವರ್ಷಗಟ್ಟಲೇ ಡೇಟಿಂಗ್ ಮಾಡುವ ಜೋಡಿಗಳನ್ನು ನಾವು ಕಾಣುತ್ತೇವೆ. ಅಸಮರ್ಪಕ ಬಾಲ್ಯ, ಮಾನಸಿಕವಾಗಿ ಪಕ್ವವಾಗುವ ಮುನ್ನವೇ ದೇಹ ಹಲವು ಹೊಸತುಗಳಿಗೆ ತೆರೆದುಕೊಳ್ಳುವುದು, ಲೈಂಗಿಕ ಆಘಾತ, ಹಿಂಸೆ, ದೈಹಿಕ ಶೋಷಣೆಗೆ ಈಡಾಗುವವರಿಗೆ ಸಮಾಜವು ಸಾಕಷ್ಟು ಧೈರ್ಯವನ್ನಾಗಲೀ ಬೆಂಬಲವನ್ನಾಗಲೀ ನೀಡುವುದಿಲ್ಲ. ಸದಾ ಗಡಿಬಿಡಿಯಲ್ಲಿರುವ ಜನ, ನಾಳೆಯನ್ನು ಇಂದೇ ಅನುಭವಿಸುವ ಧಾವಂತದಲ್ಲಿದ್ದುಬಿಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಮನುಷ್ಯನೇ ಅಲ್ಲದ, ಆದರೆ ಮನುಷ್ಯನಿಗಿಂತಲೂ ಹಿತವಾಗಿ, ತಮಗೆ ಬೇಕೆನಿಸಿದ ರೀತಿಯಲ್ಲಿ ಸ್ಪಂದಿಸುವವರೊಬ್ಬರು ಯಂತ್ರದ ರೂಪದಲ್ಲಿ ಸಿಕ್ಕರೆ ಯಾರು ಬೇಡವೆನ್ನುತ್ತಾರೆ?

ಆಧುನಿಕ ಸಮಾಜದ ಪ್ರತೀ ಕುಟುಂಬದಲ್ಲಿ ಒಬ್ಬನಾದರೂ ಏಕಾಂಗಿತನ–ಖಿನ್ನತೆ ಅನುಭವಿಸುತ್ತಿರುತ್ತಾರೆ ಎಂದು ಲೆಕ್ಕ ನೀಡುವ 'ಎಮೋನೀಡ್ಸ್' ಸಂಸ್ಥೆಯ ಮನೋವಿಜ್ಞಾನಿ ಡಾ. ಗೊರವ್ ಗುಪ್ತ, ಎಐ ಸಂಗಾತಿಯರು ನೀಡುವ ಸೇವೆ ಸಾಮಾನ್ಯ ಮನುಷ್ಯರಿಗಿಂತ ಸಾವಿರ ಪಾಲು ಚೆನ್ನಾಗಿರುತ್ತದೆ ಮತ್ತು ಅದರಿಂದ ಆಪ್ತ ಕ್ಷಣಗಳನ್ನು ಕಳೆಯುವ ಲಕ್ಷಾಂತರ ಯುವಕರು ಸಹಜವಾಗಿಯೇ ಎಐ ಸಂಗಾತಿಗಳ ಆಕರ್ಷಣೆಗೆ ಮರುಳಾಗುತ್ತಾರೆ ಎಂದಿದ್ದಾರೆ. ಡಿಜಿಟಲ್ ಜಗತ್ತಿನಲ್ಲಿ ಕಳೆದುಹೋಗಿರುವ ಬಹುಪಾಲು ಯುವಕ ಯುವತಿಯರಿಗೆ ಸಾಫ್ಟ್‌ವೇರ್ ಬಳಕೆ ಕರತಲಾಮಲಕ. ಆದರೆ, ಒಬ್ಬರನ್ನೊಬ್ಬರು ಮುಕ್ತವಾಗಿ ಸಂಪರ್ಕಿಸುವುದಾಗಲೀ, ಧೈರ್ಯವಾಗಿ ವ್ಯವಹರಿಸುವುದಾಗಲೀ ಮಾಡುವಾಗ ಬಹಳ ದೊಡ್ಡ ರೀತಿಯಲ್ಲಿ ವಿಫಲರಾಗುತ್ತಾರೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೇವಲ ಪಾಠ ಪ್ರವಚನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತ ವಿದ್ಯಾರ್ಥಿಗಳ ಸಾಮಾಜಿಕ ಬೆಳವಣಿಗೆಯನ್ನು ಕಡೆಗಣಿಸಿರುವುದೇ ಇದಕ್ಕೆ ಮೂಲ ಕಾರಣ ಎನ್ನುತ್ತಾರೆ ತಜ್ಞರು. ಇಂತಹ ಸಂದರ್ಭಗಳಲ್ಲಿ ಯುವಕರು ಆನ್‌ಲೈನ್‌ನಲ್ಲಿ ಸುಲಭವಾಗಿ ದೊರಕುವ ಗೆಳೆಯ ಗೆಳತಿಯರತ್ತ ಆಕರ್ಷಿತರಾಗುವುದು ಸಹಜವೇ. ಸಾಮಾಜಿಕ ಆತಂಕದಲ್ಲೇ ಕಾಲ ಕಳೆಯುವ ಅನೇಕರಿಗೆ ಒಂದು ಬಗೆಯ ಭದ್ರತಾ ಭಾವ ಮತ್ತು ಅತೀವ ಆತ್ಮವಿಶ್ವಾಸದೊಂದಿಗೆ ಬಂಧವೊಂದನ್ನು ಗಟ್ಟಿಗೊಳಿಸುವ ಎಐ ಗೆಳೆಯ ಗೆಳತಿಯರು ಮಾನಸಿಕ–ದೈಹಿಕ ನ್ಯೂನತೆ ಇರುವವರಿಗೆ ಹೊಸ ಆತ್ಮವಿಶ್ವಾಸದೊಂದಿಗೆ ಮುಕ್ತ ಅವಕಾಶ ಕಲ್ಪಿಸುತ್ತಾರೆ. ನಿಜ ಜೀವನಕ್ಕಿಂತ ಇಂಟರ್‌ನೆಟ್ ಮೂಲಕ ಹೆಚ್ಚಿನ ಜನರ ಸಂಪರ್ಕಕ್ಕೆ ಬರುವ ಜನರು, ಹೊಸ ಜಗತ್ತಿನ ಮುಂದೆ ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಾರೆ. ನಿಜ ಜೀವನದ ಸಂಬಂಧಗಳಿಂದ ಭ್ರಮ ನಿರಸನಗೊಂಡವರು, ನೋವುಂಡವರು, ಹಣ–ನೆಮ್ಮದಿ ಕಳೆದುಕೊಂಡವರು ಹೊಸ ತಂತ್ರಜ್ಞಾನದ ಅನುಕೂಲ ಪಡೆಯಲು ಉತ್ಸುಕತೆ ತೋರುತ್ತಿದ್ದಾರೆ. ಕೆಲವರು ತಮಾಷೆ–ಕುತೂಹಲಗಳಿಗಾಗಿ ಎಐ ಗೆಳತಿಯರ ಸ್ನೇಹ ಸಂಪಾದಿಸಲು ಪ್ರಯತ್ನಿಸುತ್ತಾರೆ. ಮಾತು, ಹಾವಭಾವ ಪರೀಕ್ಷಿಸಲು ಉತ್ಸುಕತೆ ತೋರುತ್ತಾರೆ. ಹೊಸ ಅನುಭವ ಪಡೆಯಲು ಹಾತೊರೆಯುವವರೂ ಇದ್ದಾರೆ. ಕೆಲವು ಜನ ತಮ್ಮ ವಿಶೇಷ ಅಗತ್ಯಗಳಿಗಾಗಿ, ಎಐ ರೋಬಾಟುಗಳ ಸಾಂಗತ್ಯ ಬಯಸುತ್ತಾರೆ. ಅತ್ಯಂತ ವಿಶಿಷ್ಟ ಸುಧಾರಿತ ಮತ್ತು ಅವಶ್ಯಕತೆಗನುಗುಣವಾಗಿ ತಯಾರಾದ ಎಐ ಚಾಟ್ ಬಾಟ್‌ಗಳು ಪ್ರೇಮದ ಹೊಸ ಭಾಷ್ಯವನ್ನೇ ಬರೆಯುತ್ತಿವೆ.



## ಯಾಂತ್ರಿಕ ಗಂಡ-ಹೆಂಡತಿಯರು

ಎಐ ಗಂಡು ಹೆಣ್ಣುಗಳನ್ನು ಯಾರು ತಯಾರಿಸುತ್ತಾರೆ ಎಂಬುದು ಜನರಿಗೆ ಬೇಕಾಗಿಯೇ ಇಲ್ಲ. ಜನ ಮಾರುಕಟ್ಟೆಯ ಬ್ರ್ಯಾಂಡ್‌ಗಳನ್ನು ಖರೀದಿಸುವುದಿಲ್ಲ, ಬದಲಿಗೆ ಲಾಭಗಳನ್ನು ಖರೀದಿಸುತ್ತಾರೆ. ಪ್ರಸ್ತುತ ರೆಪ್ಲಿಕ, ಕ್ಯಾಂಡಿ ಎಐ, ಸೋಲ್ ಜೆನ್, ಡ್ರೀಮ್ ಜಿ ಎಫ್, ಸೋಲ್ ಫನ್ ಮತ್ತು ಕುಪಿಡ್ ಎಂಬ ಎಐ ವೇದಿಕೆಗಳು ಎಐ ಗೆಳತಿಯರನ್ನು ನಿರ್ಮಿಸಿ ಮಾರುತ್ತಿವೆ. ಲಕ್ಷಾಂತರ ಡಾಲರ್ ಆರ್ಥಿಕ ಚಟುವಟಿಕೆ ನಡೆಸುತ್ತಿವೆ. ಈ ಮೊದಲು ಡೇಟಿಂಗ್ ಆ್ಯಪ್‌ಗಳ ಅತ್ಯಂತ ಜನಪ್ರಿಯವಾಗಿದ್ದ 'ಟಿಂಡರ್' ಮತ್ತು 'ಹಿಂಜ್'ಗಳು ತಮ್ಮ ಉತ್ಪನ್ನಗಳಲ್ಲಿ ಎಐಯನ್ನು ಸಮೀಕರಿಸಿಕೊಳ್ಳುತ್ತಿವೆ. ಹೊಸ ಆ್ಯಪ್‌ಗಳಾದ 'ಬ್ಲಶ್', 'ಎಐಎಂಎಂ', 'ರಿಜ್' ಮತ್ತು 'ಟೀಸರ್' ಎಐಗಳು ಮುಕ್ತವಾಗಿ ದೊರಕುತ್ತಿವೆ. ಸಂಪರ್ಕ ಬಯಸುವ ವ್ಯಕ್ತಿಗಳ ಸಂಪೂರ್ಣ ವಿವರ ಪಡೆದುಕೊಂಡು ನಂತರ ಅವರಿಗೆ ಸರಿ ಹೊಂದುವ ಗೆಳತಿಯರನ್ನು ನಿರ್ಮಿಸಿಕೊಡುತ್ತವೆ. ಅವರವರ ಅಗತ್ಯಗಳನ್ನು ಪೂರೈಸಬಲ್ಲ ಎಐ ಚಾಟ್ ಬಾಟ್‌ಗಳನ್ನು ನಿರ್ಮಿಸಿಕೊಳ್ಳುವ ಅವಕಾಶವನ್ನು ಬಳಕೆದಾರರಿಗೇ ನೀಡಿರುವ ಕೆಲವು ಕಂಪನಿಗಳು ಭಾರೀ ವ್ಯವಹಾರ ಕುದುರಿಸಿಕೊಂಡಿವೆ.

ಕೆಲವು ಜನಪ್ರಿಯ ಸಾಮಾಜಿಕ ತಾಣ ಹಾಗೂ ವಿಡಿಯೊ ವೇದಿಕೆಗಳು ಸಹ ಎಐ ಸಂಗಾತಿಯರ ಸೇವೆ ಕಲ್ಪಿಸಿಕೊಡುತ್ತಿವೆ. ವಯಸ್ಕರ ವಿಚಾರಗಳಿಗೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸುವ 'ಓನ್ಲಿ ಫ್ಯಾನ್ಸ್' ಎಂಬ ಎಐ ಸಂಗಾತಿಯನ್ನು ತಂತ್ರಜ್ಞರು ಹಲವು 'ಬಾಟ್'ಗಳನ್ನು (ರೋಬಾಟ್) ಬಳಸಿಕೊಂಡು ನಿರ್ಮಿಸಿದ್ದಾರೆ. ಅವು ಯುವಕ ಯುವತಿಯರೊಂದಿಗೆ ಸಂಕೋಚವಿಲ್ಲದೆ ಹರಟೆ ಹೊಡೆಯುತ್ತವೆ. ಆಪ್ತ ಸಮಾಲೋಚನೆ ನಡೆಸುತ್ತವೆ. ಮನಸ್ಸಿಗೆ ಹಿತ ನೀಡುವ, ಬೇರೆ ಯಾವ ಜಾಲತಾಣದಲ್ಲೂ ದೊರಕದ ವಿಶೇಷ ಚಿತ್ರಗಳನ್ನು ಸರಬರಾಜು ಮಾಡುತ್ತವೆ. ಈ ಬಾಟ್‌ಗಳನ್ನು ನಡೆಸಲು, ನಿರ್ವಹಿಸಲು ಅನೇಕರು ಬೇಕು. ಧ್ವನಿ ನೀಡುವವರು, ಚಿತ್ರ ರಚಿಸುವವರು, ನಟನಾ ಕೌಶಲವಿರುವ ಕಲಾವಿದರು, ಹೆಣ್ಣಿನಂತೆ, ಕೆಲವೊಮ್ಮೆ ಗಂಡಿನಂತೆ ವರ್ತಿಸುವ